ಡಿಸಿ ಪಾವಟೆ ಅವರೇ, ಹಿಂದೀ ಸಾಹಿತ್ಯದ ಬಗ್ಗೆ ಇಂಟರ್‌ವ್ಯೂ ಮಾಡಿ, ಆಯ್ಕೆ ಮಾಡಲ್ಪಟ್ಟು, ಪ್ರಖ್ಯಾತ ಕರ್ನಾಟಕ ಕಾಲೇಜಿನಲ್ಲಿ 33 ವರ್ಷ ಸೇವೆ ಸಲ್ಲಿಸಿದವನು. ಹಿಂದೀ ಕಲಿಸುತ್ತ, ಕನ್ನಡವನ್ನು ರಚಿಸಿ ಆರಾಧಿಸಿದವನು. ಆ ಕಾಲದ ಪ್ರಸಿದ್ಧ ಹಿಂದೀ ಪಂಡಿತರಾಗಿದ್ದ ಕಾ.ಚ. ಸಾರಂಗಮಠ, ಸು.ವಿ. ಭಟ್, ಗುರುನಾಥ ಜೋಶಿ, ಸಿದ್ಧನಾಥ ಪಂತರಿಂದ ಹಿಂದೀ ಸಾಧಿಸಿಕೊಂಡಿದ್ದವನು. ಹಿಂದೀ ಆಶುಭಾಷಣ ಸ್ಪರ್ಧೆಯಲ್ಲಿ ಕವಿವಿಗೆ ಪ್ರಥಮನಾಗಿ ಸತತ ಎರಡು ವರ್ಷ ದಿಲ್ಲಿಯಲ್ಲಿ ಅ.ಭಾ. ಯುವಜನಮಹೋತ್ಸವದಲ್ಲಿ ಪಾಲುಗೊಂಡ ಏಕಮಾತ್ರ ವ್ಯಕ್ತಿ. ಜೊತೆಗೆ, ಹಿಂದೀ ಮಾತೃಭಾಷೆಯವನಾಗಿರದ ನಾನು ಭಾರತೀಯ ಜೀವವಿಮಾ ನಿಗಮಕ್ಕೆ ಹಿಂದಿಯಲ್ಲಿ ನಿಗಮಗೀತೆ ರಚಿಸಿಕೊಟ್ಟವನು. ಚಂಪಾ, ಗಿರಡ್ಡಿ, ಅನಿಲ ಗೋಕಾಕ, ಗಿರೀಶ ಕಾರ್ನಾಡ, ಕಲಬುರ್ಗಿ, ಕಂಬಾರರಂಥ ಒಡನಾಡಿಗಳನ್ನು ಹೊಂದಿದ್ದವನು.

ಧಾರವಾಡ ಆಕಾಶವಾಣಿಯ ಆರಂಭದ ದಿನಗಳಿಂದಲೇ ಅದರೊಂದಿಗೆ ಬೆಸೆದುಕೊಂಡಿದ್ದವನು. ಆಕಾಶವಾಣಿಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಹಿಂದೀ ಕಲಿಸುವ ಯೋಜನೆ ಆರಂಭಗೊಂಡಾಗ, ರೂಪರೇಷೆ ಹಾಕಿಕೊಟ್ಟು, ಅದರ ಮೊದಲ 10 ಪಾಠಗಳನ್ನು ಬರೆದು, ಪ್ರಸಾರ ಮಾಡಿದವನು. 1957ರಲ್ಲಿ ಧಾರವಾಡದಲ್ಲಿ ಕುವೆಂಪು ಅಧ್ಯಕ್ಷರಾಗಿದ್ದ ಸಾಹಿತ್ಯ ಸಮ್ಮೇಳನದಲ್ಲಿ ಅಧಿಕೃತ ಸದಸ್ಯನಾಗಿ ಪಾಲುಗೊಂಡಿದ್ದವನು. ವಿದ್ಯಾವರ್ಧಕ ಸಂಘಕ್ಕೆ ಐದು ವರ್ಷ ಪ್ರಧಾನ ಕಾರ್ಯದರ್ಶಿಯಾಗಿ ಅವಿಸ್ಮರಣೀಯ ಕಾರ್ಯಕ್ರಮ ಆಯೋಜಿಸಿದವನು. ಸಾಲಿ ರಾಮಚಂದ್ರರಾಯರು, ಬೇಂದ್ರೆ, ಶಂಬಾ ಜೋಶಿ, ಬೆಟಗೇರಿ ಕೃಷ್ಣಶರ್ಮ, ಬಸವರಾಜ ಕಟ್ಟೀಮನಿ, ರಾ.ಯ. ಧಾರವಾಡಕರ, ಶೇ.ಗೋ. ಕುಲಕರ್ಣಿ, ಗೀತಾ ಕುಲಕರ್ಣಿ, ಎನ್ಕೆ, ಸಂ.ಶಿ. ಭೂಸನೂರಮಠ, ಪಂ. ಚೆ.ಎ. ಕವಲಿ, ಹಳ್ಳಿಕೇರಿ ಗುದ್ಲೆಪ್ಪ, ಗ.ಸ. ಹಾಲಪ್ಪ, ಎಂ. ಅಕಬರ ಅಲಿ, ಗಂಗಪ್ಪ ವಾಲಿ, ಪಾ.ವೆಂ. ಆಚಾರ್ಯ, ಶ್ರೀನಿವಾಸ ಹಾವನೂರ, ಮಲ್ಲಿಕಾರ್ಜುನ ಮನಸೂರ, ಸದಾಶಿವ ಒಡೆಯರ, ಷ. ಶೆಟ್ಟರ, ಶಾಂತಿನಾಥ ದೇಸಾಯಿ, ಕೆ.ಜೆ. ಮಹಾಲೆ, ಎಸ್.ಬಿ. ಶಾಪೇಟಿ ಮುಂತಾದ ಅನೇಕ ಪ್ರತಿಷ್ಠಿತರೊಂದಿಗೆ ನಿಕಟ ಸಂಬಂಧ, ಸಂಪರ್ಕ ಹೊಂದಿದ್ದವನು.

ಅನೇಕ ಕಂಪನಿ ನಾಟಕ, ಕಲಾವಿದರು, ಸರ್ಕಸ್ಸುಗಳನ್ನು ಈ ಊರಿನಲ್ಲಿಯೇ ನೋಡಿದ್ದೇನೆ. ನಾನು ರಂಗಸಮಾಜದ ಸದಸ್ಯನಾಗಿದ್ದಾಗ ಪ್ರಸನ್ನ, ನಂತರ ಚಿದಂಬರರಾವ್ ಜಂಬೆ ಜೊತೆ ಇಲ್ಲಿಯ ರಂಗಾಯಣದ ಹುಟ್ಟಿಗೆ ಕಾರಣನಾಗಿದ್ದೇನೆ. ಇಂಥ ಏನೇನೋ ಎಷ್ಟೆಷ್ಟೋಗಳ ಜೊತೆಗೆ ನನ್ನ ಸಾಹಿತ್ಯಿಕ ಮತ್ತು ಭೌತಿಕ ಬದುಕನ್ನು ಕಟ್ಟಿದ ಮೂರು ಪ್ರಣಯಪ್ರಸಂಗಗಳಿಗೆ ಈ ಊರು ನೆಲೆ ನೀಡಿದೆ. ಈ ಎಲ್ಲ ಪ್ರಸಂಗ, ಘಟನೆ, ವ್ಯಕ್ತಿಸಂಬಂಧಗಳಿಗೆ ತನ್ನ ಉಸಿರಿರುವವರೆಗೂ ಪ್ರತ್ಯಕ್ಷ ಸಾಕ್ಷಿಯಾಗಿದ್ದವಳು ನನ್ನವ್ವ ಗಿರಿಜವ್ವ. ಇಂಥ ಹಡೆದವ್ವ ಮತ್ತು ಧಾರವಾಡ ಎಂಬ ಪಡೆದವ್ವ ನನಗೆ ಎಲ್ಲಾ ನೀಡಿ ಉಣಿಸಿದ್ದಾರೆ, ಕರುಣಿಸಿ ಕಾಪಾಡಿದ್ದಾರೆ. ಈ ಊರ ಮಣ್ಣಿನ ಕಣಕಣದಲ್ಲಿ ತಾಯಿತನವೂ ಇದೆ, ಅವ್ವತ್ವವೂ ಇದೆ. ಇಂಥ ಧಾರವಾಡವ್ವನಿಗೆ ಕೃತಜ್ಞತೆ ಹೇಳಲೆ? ಬೇಡ, ಈ ಅವ್ವನ ಪಾದದೂಳಿ ಸದಾ ನನ್ನ ಹಣೆಯ ಮೇಲಿರಲಿ, ಸಾಕು.

◆ **ಅಂದಿನ ನಿಮ್ಮ ಹಿರೀಕರ ಬಗ್ಗೆ, ಅವರ ಸಾಹಿತ್ಯಿಕ–ಸಾಂಸ್ಕೃತಿಕ ಒಲವು–ನಿಲುವುಗಳ ಬಗ್ಗೆ ನಿಮಗೆ ಕ್ವಚಿತ್ತಾಗಿಯಾದರೂ ಒಂದಿಷ್ಟು ಇರುಸುಮುರುಸುಗಳಿದ್ದಿರಬೇಕಲ್ಲ. ಯಾಕೆ ಕೇಳಿದೆ ಅಂದರೆ, ನಂಗೆ ಬೇಂದ್ರೆ–ಚಂಪಾ ಜುಗಲ್‌ಬಂದಿಯ ನೆನಪಾಯ್ತು. ಆದ್ರೆ ಅದೆಲ್ಲವನ್ನು ಶುದ್ಧ ಸಾಹಿತ್ಯಿಕ ವಾಗ್ವಾದವಾಗಿಸಿಕೊಂಡು ಮುನ್ನಡೆದಿರಿ. ಆ ಬಗ್ಗೆ ಹೇಳಬಲ್ಲಿರಾ? ಯಾಕೆಂದರೆ ಈಗೀಗ ಅಂತಹ ಅಂತಃಕರಣದ ಸೆಳಕೇ ಕಳೆದುಹೋಗುತ್ತಿರುವ ಭಯವಿದೆ.**